ಭದ್ರಾವತಿ–ಚೆನ್ನಗಿರಿ–ದಾವಣಗೆರೆ ಮುಖ್ಯ ರಸ್ತೆಯ ದ್ಯಾಮಣ್ಣನ ಕೆರೆಯ ಸೇತುವೆ ರಿಪೇರಿ

473 (756): ಶ್ರೀ ಕರಿಯಣ್ಣ (ಹೊಳೆಹೊನ್ನೂರು):–

ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ತಾರೀಖು 16–11–92 ಹಾಗೂ 17–11–92ರಂದು ಬಿದ್ದ ಭಾರೀ ಮಳೆಯಿಂದ ಒಡೆದು ಹೋದ ಭದ್ರಾವತಿ–ಚನ್ನಗಿರಿಯ ಮುಖ್ಯ ರಸ್ತೆಯ ದ್ಯಾಮಣ್ಣನ ಕೆರೆಕೋಡಿ ಸೇತುವೆಯನ್ನು ಯಾವಾಗ ದುರಸ್ತಿಯನ್ನು ಮಾಡಲಾಗುವುದು;

ಆ) ಇದನ್ನು ತಕ್ಷಣ ನಿರ್ಮಾಣ ಮಾಡದಿದ್ದರೆ, ಭದ್ರಾವತಿ–ಚನ್ನಗಿರಿ – ದಾವಣಗೆರೆ ಮತ್ತು ಚಿತ್ರದುರ್ಗಕ್ಕೆ ಹೋಗುವುದಕ್ಕೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಕೆ.ಹೆಚ್. ರಂಗನಾಥ್, (ಲೋಕೋಪಯೋಗಿ ಸಚಿವರು):–

ಅ) ಈಗಾಗಲೇ ಪರ್ಯಾಯ ರಸ್ತೆ ನಿರ್ಮಾಣ ಮಾಡಿ ವಾಹನ ಸಂಚಾರಕ್ಕೆ ಅನುವು ಮಾಡಲಾಗಿದೆ ಮತ್ತು ಸೇತುವೆಯ ಪುನರ್ ನಿರ್ಮಾಣಕ್ಕಾಗಿ ಕ್ರಮ ತೆಗೆದುಕೊಳ್ಳಲಾಗಿದೆ.

ಆ) ಹೌದು.

ಭದ್ರಾ ಡ್ಯಾಂ ಒಳಗಡೆ ಬರುವ ನೀರಿನಿಂದ ಆವೃತವಾದ ಗ್ರಾಮಗಳ ವರ್ಗಾವಣೆಗೆ ಹಣ ಬಿಡುಗಡೆ

474 (755): ಶ್ರೀ ಕರಿಯಣ್ಣ (ಹೊಳೆಹೊನ್ನೂರು):–

ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) 1991–92ನೇ ಸಾಲಿನಲ್ಲಿ ಭದ್ರಾ ನೀರಾವರಿ ಪ್ರದೇಶದಲ್ಲಿ ರಸ್ತೆ, ಸೇತುವೆ, ಗ್ರಾಮಗಳ, ವರ್ಗಾವಣೆ ಪೀಡರ್ ಚಾನಲ್ ಮಾಡಲು ವರ್ಷಕ್ಕೆ 5ಕೋಟಿಯಂತೆ 3ವರ್ಷಕ್ಕೆ ಹಣ ಕೊಡಬೇಕೆಂದು ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ತೀರ್ಮಾನವಾಗಿರುವುದು ನಿಜವೆ;

ಆ) ಹಾಗಿದ್ದಲ್ಲಿ, ಆ ಬಗ್ಗೆ ಹಣ ಬಿಡುಗಡೆಯಾಗುತ್ತಿರುವುದೇ;

ಇ) ಇಲ್ಲದಿದ್ದರೆ, ಇದಕ್ಕೆ ಕಾರಣವೇನು ?

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯಮಂತ್ರಿಗಳು):–

ಅ) ದಿನಾಂಕ 21.3.91 ರಂದು ನಡೆಸಿದ ಸಭೆಯಲ್ಲಿ ಇಂತಹ ತೀರ್ಮಾನ ಕೈಗೊಳ್ಳಲಾಯಿತು.

ಆ) 1991–92ನೇ ಸಾಲಿನಲ್ಲಿ ಭದ್ರಾ ಯೋಜನೆಯ ಕಾಮಗಾರಿಗಳಿಗೆ 5.25ಕೋಟಿ ರೂ.ಗಳನ್ನು ವೆಚ್ಚ ಮಾಡಲಾಯಿತು. 1992–93ನೇ ಸಾಲಿನಲ್ಲಿ ಭದ್ರಾ ಯೋಜನೆಗೆ 6.00 ಕೋಟಿ ರೂ.ಗಳ ಅನುದಾನವನ್ನು ನೀಡಲಾಗಿದೆ.

ಇ) ಪ್ರಶ್ನೆ (ಅ)ಗೆ ನೀಡಿರುವ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.